
ಇದು ಕೊಂಚ ಮಟ್ಟಿಗೆ ಕಾಣುವುದು 'ದಾರಿ ತಪ್ಪಿಸುವ ಗಿಡ' ಎಂಬ ಕಥೆಯಲ್ಲಿ. ಪೊನ್ನಾಚಿ ಚಾಮರಾಜನಗರದ ಪ್ರಾದೇಶಿಕ ಬದುಕನ್ನು ಹೊಸ ಬಗೆಯಲ್ಲಿ ನಿರೂಪಿಸುವ ಹೊಣೆಗಾರಿಕೆಯನ್ನು ಹೊತ್ತಿದ್ದಾರೆ. ಇದಕ್ಕೆ ಅವರ ಭಿನ್ನ ಬಗೆಯ ಅನುಭವಲೋಕವೂ ನೆರವಿಗೆ ಬಂದಿದೆ. ಅಲ್ಲಿ ಬರುವ ನಿಸರ್ಗದ ವಿವರಗಳು ಬದಲಾದ ಬದುಕನ್ನು ಹಿಡಿಯಲು ಯತ್ನಿಸಿವೆ. ಹೊಸಬರ ಕಥಾಲೋಕದಲ್ಲಿ ಕಾಣೆಯಾಗಿರುವ 'ಹಸಿರು ಲೋಕ' ಮತ್ತು 'ಬದುಕಿನ ಪಲ್ಲಟ'ಗಳನ್ನು ಸ್ವಾಮಿ ನಿರೂಪಣೆ ಮಾಡುತ್ತಿದ್ದಾರೆ. ಕಥನ ತಂತ್ರ, ಪಾತ್ರಗಳ ಪರಿಚಯ ಮತ್ತು ನಿಸರ್ಗದ ವಿವರಗಳು ದಟ್ಟತೆಯನ್ನು ಧರಿಸಿವೆ. 'ದಾರಿ ತಪ್ಪಿಸುವ ಗಿಡ', 'ನಾಮ್ದರೆ ಜೇನು' ಕಥೆಗಳು ಮೇಲಿನ ಹಾದಿಯನ್ನು ಹಿಡಿದಿವೆ. ಸ್ಥಳೀಯ ಜ್ಞಾನಗಳು ತಮ್ಮ ಸ್ವರೂಪವನ್ನು ಬದಲಿಸಿಕೊಳ್ಳುವ ದಟ್ಟತೆಯ ಕುರಿತು ಇವರು ಎಚ್ಚರವಾಗಿದ್ದಾರೆ. ಪೊನ್ನಾಚಿ ಅರಿಯಬೇಕಾಗಿರುವುದು ಅತಿಯಾದ ಮಾತುಕತೆ ಕಥೆಯ ರಚನೆಗೆ ಅಡ್ಡಿಯಾಗುತ್ತದೆ ಎಂಬುದನ್ನು. ವಿವರಗಳು ಅತಿಯಾದರೆ ವಸ್ತುವಿನ ಸಾತತ್ಯಕ್ಕೆ ಭಂಗವಾಗುತ್ತದೆ. 'ಶಿವನಜ್ಜಿ', 'ಸ್ವಾಮೀಜಿಯ ಪಾದವೂ ಹೆಣದ ತಲೆಯೂ' ಕಥೆಗಳು ಅವರ ಕಥನಗಾರಿಕೆಯ ತಾಜಾತನಕ್ಕೆ ಸಾಕ್ಷಿ. ಹಾಗೆಯೇ ವಸ್ತುವಿನ ಭಿನ್ನತೆಗೆ ನಿದರ್ಶನವಾಗಿವೆ. ವೈಚಾರಿಕತೆಯನ್ನು ಹೊತ್ತ ಪಾತ್ರವೊಂದು ಮಠದ ಸ್ವಾಮೀಜಿಯಾಗುವ ಪ್ರಕ್ರಿಯೆ ದಂಗುಬಡಿಸುತ್ತದೆ. ಅಲ್ಲಿ ನಂಬಿಕೆ, ಆಚರಣೆ ಮತ್ತು ಸಂಬಂಧಗಳು ವಿಚಿತ್ರ ಬಗೆಯಲ್ಲಿ ಒದ್ದಾಡುತ್ತವೆ. ಜಾತಿಯನ್ನು ವಿರೋಧಿಸುವ ಮನುಷ್ಯ ನಿರ್ದಿಷ್ಟ ಚೌಕಟ್ಟಿಗೆ ಬರುವುದು ಈ ಕಾಲಮಾನದ ನಿದರ್ಶನವೇ ಆಗಿದೆ. ಬದಲಾವಣೆಗೆ ಹಾತೊರೆಯುವ ಮನುಷ್ಯನನ್ನು ಸ್ಥಗಿತಗೊಳಿಸುವ ಶಕ್ತಿ ನಮ್ಮ ಮಧ್ಯೆಯೇ ಇದ್ದಾಗ ಅವನು ದಿಗ್ಭ್ರಮೆಗೆ ಒಳಗಾಗಬೇಕೋ? ಅಥವ ಕೆಟ್ಟ ರಾಜಕಾರಣಕ್ಕೆ ಒಳಗಾಗಬೇಕೋ? ಎಂಬ ಪ್ರಶ್ನೆಗಳನ್ನು ಕಥೆ ಎಬ್ಬಿಸುತ್ತದೆ. ಸ್ವಾಮಿ ಪೊನ್ನಾಚಿಯನ್ನು ಬಹಳ ಕಾಲ ಉಳಿಸುವ ಕಥೆ 'ಹದಿನಾರು ಕಂಬದ ಮನೆ'. ಪಾರಂಪರಿಕ ವಸ್ತುವನ್ನು ಪಲ್ಲಟಗೊಳಿಸುವುದು; ಕಥೆಯ ದೇಹವನ್ನು ಪ್ರಯೋಗದ ಮಟ್ಟಕ್ಕೇರಿಸುವಾಗ ಇರುವ ಸಂಯಮ; ಗ್ರಾಮದ ಆತ್ಮಗಳು ಕಾಲವನ್ನು ಮೀರಿ ಜಾತಿಯನ್ನು ಅರ್ಥಮಾಡಿಕೊಂಡಿರುವ ಬಗೆ, ಈ ಎಲ್ಲಾ ಸಾಮರ್ಥ್ಯಗಳಿಂದ ಕಥೆ ಮುಖ್ಯವಾಗುತ್ತದೆ. ಪರಮೇಶಿಯ ಶಿಕ್ಷಣ ನಿಜವಾದ ಕ್ರಾಂತಿಯನ್ನು ಮಾಡಿದೆ. ಅಂತರಂಗದ ಹೋರಾಟ ಇಲ್ಲಿ ಗೆದ್ದಿದೆ. ಭೂತವನ್ನು ಮರೆಯದ ಮುಗ್ಧತೆ, ವರ್ತಮಾನವನ್ನು ಆವರಿಸಿಕೊಳ್ಳದ ದ್ವೇಷ, ಪರಮೇಶಿಯ ನಿಜವಾದ ಸಂಘಟನೆ ಮತ್ತು ಹೋರಾಟ – ಇಂಥ ಕಡೆ ದಲಿತತತ್ವದ ಸಾಧನೆಗಳನ್ನು ಗುರುತಿಸಬಹುದು. ಪೊನ್ನಾಚಿಗೆ ಬದಲುಗೊಂಡ ಆದಿವಾಸಿ ಜನಾಂಗಗಳ ಬದುಕಿನ ಪಲ್ಲಟಗಳು ಮುಖ್ಯವಾದಂತೆ ಕಾಣುತ್ತದೆ. ಆದರೆ, ಈ ಕ್ರಮ ಮತ್ತಷ್ಟು ಸಾಂದ್ರತೆಯನ್ನು ರೂಪಿಸಿಕೊಳ್ಳಬೇಕು. ಕಾಡಿನ ಆತ್ಮವನ್ನು ಮತ್ತು ಬದಲಾದ ಬದುಕನ್ನು ಅರಿಯಬೇಕಾದರೆ ಏಕಾಂತ ಹಾಗು ಲೋಕಾಂತವನ್ನು ಧ್ಯಾನಿಸಬೇಕಾಗುತ್ತದೆ. ಹಾಗೆಯೇ ಇವೆರಡರ ನಡುವಿನ ಗದ್ದಲವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕಾಗುತ್ತದೆ.




ನಗರ ಮತ್ತು ಗ್ರಾಮಗಳ ಸುತ್ತ ಓಡಾಡುವ ಬದುಕನ್ನು ದಯಾನಂದ ತಮ್ಮ ಕಥೆಗಳಲ್ಲಿ ಬಳಸಿಕೊಂಡಿದ್ದಾರೆ. ಇವು ವಲಸೆ ಮತ್ತು ಸಂಕರಗೊಂಡ ಆಂತರ್ಯದಲ್ಲೇ ಜಾಗಪಡೆದಿವೆ. ಮುಸ್ಲಿಂ ಬದುಕಿನ ತಲ್ಲಣಗಳು, ಖಾಸಗಿ ಕಂಪನಿಗಳಲ್ಲಿ ಉಂಟುಮಾಡುವ ಜಾತಿ ತವಕಗಳು, ವಲಸೆಯಿಂದ ದಿಕ್ಕೆಟ್ಟ ಮನೋಲೋಕ, ಇತ್ಯಾದಿ ಅಂಶಗಳನ್ನು ಇವರ ಕಥೆಗಳು ಗರ್ಭೀಕರಿಸಿಕೊಂಡಿವೆ. ಕಥೆಯ ನಿರ್ಮಾಣದಲ್ಲಿ ಕೊಂಚ ಗಮನಸೆಳೆಯುವ ದಯಾನಂದ, ಗ್ರಾಮೀಣ ಬದುಕನ್ನು ಸೂಕ್ಷ್ಮವಾಗಿ ನೋಡುವ ಹಾಗೆ ಕಂಪನಿಗಳ ಜೀವನಕ್ರಮವನ್ನು ಅಭಿವ್ಯಕ್ತಿಸುವಾಗ ಅಷ್ಟೊಂದು ಯಶಸ್ವಿಯಾಗಲಾರರು. ಇದರಲ್ಲಿ ಕೃತಕತೆ ಎದ್ದು ಕಾಣುತ್ತದೆ. ನಿರೂಪಣೆಯಲ್ಲಿ ಗೊಂದಲವಿಲ್ಲದಿರುವುದು ಇವರ ಶಕ್ತಿ. ನಗರದ ಕಂಪನಿಗಳ ಕಥೆಗಳನ್ನು ಹೇಳುವಾಗ ಅದರ ಸುತ್ತಣ ಜಗತ್ತಿನ ವ್ಯಕ್ತಿಪರಿಚಯವೋ? ಬರಿ ವಿವರಗಳೋ? ಎಂಬ ಅನುಮಾನವೂ